## ನವಿಲುಗನ್ನಡಿ

ಜನವರಿ ಸಂಚಿಕೆ ಓದುಗರನ್ನು ಆಕರ್ಷಿಸುವಂತಿತ್ತು. ರಾಜಾ ರವಿ ವರ್ಮನ ಕಲಾಕೃತಿ ಇರುವ ಮುಖಪುಟ ವರ್ಣರಂಜಿತವಾಗಿದೆ. ಈ ಸಂಚಿಕೆಯ ಎಲ್ಲ ಕತೆಗಳು ಓದಿಸಿಕೊಳ್ಳುವಂತಿವೆ. 'ಸುವರ್ಣ ಸಂಭ್ರಮ'ದಲ್ಲಿರುವ 'ಮಯೂರ' ನೂರು ವರ್ಷಗಳನ್ನು ಪೂರೈಸಲಿ.

**ಎಸ್. ಮಣಿಕಾಂತ್, ಮೈಸೂರು**

ವರ್ಷದ ಮೊದಲ ಸಂಚಿಕೆ ಓದಿ ಹೆಮ್ಮೆಯಾಯಿತು. ಸುದೀರ್ಘಕಾಲ ಜನರನ್ನು ರಂಜಿಸುತ್ತ ಬಂದ ಪತ್ರಿಕೆ 50ನೇ ವರ್ಷಕ್ಕೆ ಕಾಲಿಟ್ಟಿರುವುದು ದಾಖಲೆಗೆ ಅರ್ಹವಾಗಿದೆ.

**ಸುರಭಿ ರಾವ್, ತುಮಕೂರು**

'ನಮ್ಮಲ್ಲಿಯೇ ಇರುವ ದೈವತ್ವ ರಾಕ್ಷಸತ್ವ' (ಎಸ್. ಸೂರ್ಯಪ್ರಕಾಶ ಪಂಡಿತ್) ಅವರ ಲೇಖನ ಉಪನಿಷತ್ ಕತೆಯ ತಿರುಳನ್ನು ಸಾಮಾನ್ಯ ಬುದ್ಧಿಮತ್ತೆಯ ಓದುಗನಿಗೂ ಸರಿಯಾಗಿ ಮನದಟ್ಟು ಮಾಡಿಕೊಡುವಂತಿದೆ.

**ಹೊ.ನಾ. ಲಲಿತ, ಹೊಸಪೇಟೆ**

'ಆ್ಯಸ್ಪಿನ್‌ವಾಲ್ ದೀಪಗೃಹದ ಸಂಚಾಲಕ' (ಮೂಲ: ಹೆನ್ರಿಕ್ ಶೀನ್‌ಕೇವಿಜ್, ಕನ್ನಡಕ್ಕೆ: ಸಿದ್ಧರಾಜ ಪೂಜಾರಿ) ಮೆಚ್ಚುಗೆಯಾಯ್ತು. ಉತ್ತಮ ಅನುವಾದಕ್ಕೆ ಈ ಕತೆ ಮಾದರಿ.

**ಆರ್.ವಿ. ಕುಲಕರ್ಣಿ, ಬೆಳಗಾವಿ**

'ನನ್ನ ಕಥಾಪ್ರಸಂಗ'ದಲ್ಲಿ ಪ್ರಕಟವಾದ ಗೋಪಾಲಕೃಷ್ಣ ಪೈ ಅವರ 'ಕಥೆಯ ಬರವಣಿಗೆ ಒಂದು ಧ್ಯಾನಸ್ಥ ಸ್ಥಿತಿ' ಲೇಖನ ಕಥನ ಕಲೆಯ ಕುರಿತಂತೆ ಹಲವು ಹೊಳಹುಗಳನ್ನು ಕೊಡುವಂತಿದೆ.

**ಕೆ.ಬಿ. ರವೀಂದ್ರ, ಕೋಲಾರ**



ಮಧುರಾ ಕರ್ಣಮ್ ಅವರ ಕತೆ 'ಅಕ್ಕಮ್ಮ' ನಿಜಕ್ಕೂ ಹೃದಯ ವಿದ್ರಾವಕವಾಗಿದೆ. ಅಸಹಾಯಕ ಹೆಣ್ಣನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವ ವಸ್ತು ಇರುವ ದೀಪ್ತಿ ಭದ್ರಾವತಿ ಅವರ ಕತೆ 'ಭಾಗೀಚಿಕ್ಕಿ' ಕಣ್ಣನ್ನು ತೇವಗೊಳಿಸಿತು.

**ಕೆ. ಅನಂತಮೂರ್ತಿ, ಕುಶಾಲನಗರ**

'ಇಂಚು' (ಕರ್ಕಿ ಕೃಷ್ಣಮೂರ್ತಿ), 'ಸರಹದ್ದು' (ಗೋಪೀನಾಥ್ ರಾವ್), 'ಪ್ರೇಮ, ಮದುವೆ ಮತ್ತು ಶೀಲ' (ಬಿ.ಎಲ್. ವೇಣು) ಕತೆಗಳು ಆಕರ್ಷಕ ಕಥಾವಸ್ತು, ಮೋಹಕ ಶೈಲಿಯಿಂದ ಸರಾಗವಾಗಿ ಓದಿಸಿಕೊಂಡವು.

**ಎನ್. ಮಹಾದೇವ, ಚೆನ್ನೈ**

'ಮಯೂರ' ಆರಂಭವಾಗಿ ಐವತ್ತು ವರ್ಷಗಳಾದವು ಎಂದು ಜನವರಿ ತಿಂಗಳ ಸಂಚಿಕೆಯಿಂದ ತಿಳಿದುಬಂತು. ಸಾಹಿತ್ಯ ಪತ್ರಿಕೆಯೊಂದು 50 ವರ್ಷಗಳ ಕಾಲ ನಡೆದು ಬಂದದ್ದು ಆಶ್ಚರ್ಯ, ಸಂತೋಷದ ಸಂಗತಿ. ನಾನೂ ಸಹ 'ಮಯೂರ', 'ಪ್ರಜಾವಾಣಿ'ಯ ಮೂಲಕವೇ ಲೇಖಕನಾದದ್ದು ಎಂದು ಈ ವೇಳೆ ಹೇಳಿಕೊಳ್ಳಬಯಸುತ್ತೇನೆ.

**ಕೃಷ್ಣಮೂರ್ತಿ ಹನೂರು, ಮೈಸೂರು**